ಗಂಗಿರೆಡ್ಡಿಯ ಅಣ್ಣ ಇದಕ್ಕೆ ತಕ್ಷಣವೇ ಒಪ್ಪಿ ಹಣವನ್ನು ತನ್ನ ಕೈಯಿಗೇ ಕೊಡಬೇಕಾಗಿ ಮಾತಾಡುತ್ತಾನೆ. ಈ ಕಥೆಯ ಆಯಾಮ ಎಷ್ಟೊಂದು ಬೆಳೆಯುತ್ತದೆ ಎಂದರೆ ಒಂದೆಡೆ ಆಧುನಿಕತೆ ಎನ್ನುವುದು ಈ ಮೊದಲು ನಮ್ಮ ಮೂಢನಂಬಿಕೆ, ಅಂಧವಿಶ್ವಾಸಗಳನ್ನು ಅಳಿಸಿ ಹಾಕುತ್ತೆ ಎನ್ನುವ ನಂಬಿಕೆ ಇತ್ತು. ಆದರೆ ಆಧುನಿಕತೆಯ ತಿರುವು ನೋಡಿದರೆ ಇಲ್ಲಿ ಅದು ಹೊಸ ರೂಪ ತಾಳಿ ಬಂದರೂ ಒಳಗಿರುವ ರಾಕ್ಷಸನ ಚರ್ಯೆಯನ್ನು ಬಿಟ್ಟುಕೊಟ್ಟಂತೆ ಕಾಣುತ್ತಿಲ್ಲ. 'ಶನಿ' ಯಾರಿಗೆ ಹೆಗಲೇರಿದ್ದಾನೆ? ಎಂಬುದು ಪ್ರಶ್ನೆ. ಅದೇ ಇಲ್ಲಿನ ವ್ಯಂಗ್ಯ ಕೂಡ.

'ಮಹಾತ್ಮೆ' ಎನ್ನುವುದು ಖಂಡಿತವಾಗಿ ಕಾಲ ಮಹಾತ್ಮೆಯೇ! ಹೀಗೆ 'ಮಹಾತ್ಮೆ' ರೂಪಕದಲ್ಲಿ ಸಂಕೀರ್ಣವಾದ ಹೊರಳನ್ನು ಈ ಕಥೆ ಹೇಳುತ್ತದೆ. ಈ ಸಂಕಲನದ ಕಥೆಗಳಲ್ಲಿ ಸ್ತ್ರೀಲೋಕಗಳ ಕಥೆಗಳಿವೆ. ಸ್ತ್ರೀಲೋಕಗಳು ಎಂದಾಕ್ಷಣ ಎದುರಾಗುವುದು ಒಂದು ಶೋಷಿತ ಸಮುದಾಯದ ಜಗತ್ತು ಮತ್ತು ಅದಕ್ಕಾಗಿ ಹೋರಾಡಿ ನವೆದ ಜೀವಗಳ ಜಗತ್ತು. ಇವು ಎಂದಿದ್ದರೂ ನೋವಿನ ಜಗತ್ತುಗಳೇ ಎನ್ನಿಸುವಷ್ಟು ಯಾತನಾಮಯ. ರಮೇಶಬಾಬು ಅವರ ಕಥೆಗಳಲ್ಲಿ ಈ ಶೋಷಣೆಗಳನ್ನು ವಿಜೃಂಭಿಸಿ, ರಂಜನೆಯ ರೂಪದಲ್ಲಿ ಹೇಳುವ ವಿಧಾನಕ್ಕಿಂತ ಹೋರಾಡಿ ಬದುಕು ಕಟ್ಟಿಕೊಳ್ಳುವ ಸ್ತ್ರೀಚೈತನ್ಯಗಳನ್ನು ಕಾಣುವುದು ಮುಖ್ಯವಾಗಿದೆ. ಇಲ್ಲಿನ ಸ್ತ್ರೀ ಜಗತ್ತುಗಳು ನಿರಂತರವಾದ ಶೋಷಣೆಗಳಲ್ಲಿ ನಲುಗಿ ಜೀರ್ಣವಾಗಿ ಹೋಗುವ ಸಂದರ್ಭದಲ್ಲೂ ಹೇಗೊ ಜೀವಚೈತನ್ಯವನ್ನು ಉಳಿಸಿಕೊಂಡು ಬದುಕುವ ಜೀವಗಳನ್ನು ಹೊಂದಿವೆ. ತಮಗರಿವಿಲ್ಲದೆ ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ದನಿ ಎತ್ತುವ ಮೂಲಕ ಸ್ತ್ರೀ ಅಸ್ಮಿತೆಯನ್ನು ಖಚಿತಗೊಳಿಸುವ ರೀತಿಯ ವ್ಯಕ್ತಿತ್ವಗಳು ಇವು. ಇಲ್ಲಿ 'ಮನೆ' ಕಥೆಯ ರಂಗಜ್ಜಿ ನಿರಂತರವಾಗಿ ತನ್ನ ಚಿಕ್ಕಪ್ಪನಿಂದಲೇ ಅತ್ಯಾಚಾರಕ್ಕೆ ಒಳಗಾಗಿ ನಲುಗುವ ಜೀವ. ಹಾಗೆ ಶೀಲ ಎನ್ನುವ ಪ್ರಶ್ನೆಯನ್ನು ಪಿತೃಪ್ರಧಾನ ಸಮಾಜ ಪ್ರಾಮುಖ್ಯತೆ ಕೊಡುವುದನ್ನು ಇಲ್ಲಿನ ಕೆಲವು ಕಥೆಗಳು ಎತ್ತಿಕೊಳ್ಳುತ್ತವೆ. ಆದರೆ ಅತ್ಯಾಚಾರ, ಅನಾಚಾರಗಳಾಚೆ ತಮ್ಮದೇ ಆದ ಬದುಕುಗಳನ್ನು ಕಟ್ಟಿಕೊಳ್ಳುವ ಛಲವುಳ್ಳ ಹೆಣ್ಣುಗಳು ಇಲ್ಲಿನ ಹಲವು ಕಥೆಗಳಲ್ಲಿದ್ದಾರೆ. 'ಬೇಟೆ' ಕಥೆಯ ನಾಯಕ ತನ್ನ ಹುಟ್ಟಿನ ಬಗ್ಗೆ, ಅಪ್ಪನ-ಅಮ್ಮನ ಬಗ್ಗೆ ಕೇಳಿದಾಗ ಅವಳು ಹೇಳುವ ಮಾತುಗಳು: 'ನಿಂಕೆ ಅಪ್ಪನೆ ಬೇಕ? ನಾಇಲ್ವ? ಬೆಳಸಿಲ್ವ? ವೋಗಲೆ ಮೂದೇವಿ, ಬದುಕೆ ಅಪ್ಪುನು ಅಮ್ಮು ಎಲ್ಲ, ಅದಕು ಮಿಂಚಿ ಬೇರೇನೂ ಇಲ್ಲ, ಬಂದ ಅಪ್ಪುನ ವುಡಕ್ಕಂಡು'.

ಸ್ತ್ರೀ ಲೋಕಗಳ ಕಥನವು ಹೇಗೆ ಹೊರಳಿದರೂ ಅದು ಅಲಗುಗಳನ್ನು ಹಾಯಬೇಕಾಗುತ್ತದೆ. ರಮೇಶರು ಇಲ್ಲಿ ಎತ್ತುವ ಮೂಲಭೂತ ಪಿತೃ ಪ್ರಧಾನ್ಯದ ಪ್ರಶ್ನೆಗಳು 'ಪೊಲಿಟಿಕಲಿ ಕರೆಕ್ಟ್' ಆಗಿಬಿಡುವ ಆಯಾಮವೂ ಇದೆ. ಈ ಕಾಲದ ಪ್ರತಿನಿಧೀಕರಣವು ಅಪ್ಪಟ ರಾಜಕೀಯವನ್ನು ಸೂಸುತ್ತಿರುತ್ತವೆ. ಇದರಿಂದ ತಪ್ಪಿಸಿಕೊಳ್ಳುವುದು ಹೇಗೆಂಬುದೇ ಪ್ರಶ್ನೆ. ಇದನ್ನು ರಮೇಶರು ರಂಗಜ್ಜಿ ತರದ ಕಥೆಗಳಲ್ಲಿ ಚೆನ್ನಾಗಿ ನಿರ್ವಹಿಸುತ್ತಾರೆ. ಆದರೆ ಪಾರ್ವತಿ, ಶಾರದೆಯರ ಜೀವನ ಕಥೆಗಳಲ್ಲಿ ಅನ್ಯಾಯದ ವಿರುದ್ಧ ನಿಲ್ಲುವುದು, ಸಾಮಾಜಿಕ ನ್ಯಾಯದ ಮಾತಾಡುವುದು ಒಂದು ಹಂತದಲ್ಲಿ ಕಟ್ಟುವಿಕೆ ಅನ್ನಿಸುತ್ತದೆ. ಇದು ಪ್ರಾಯಶಃ ರಮೇಶರೊಬ್ಬರದೇ ಸವಾಲಲ್ಲ. ಅದು ಈ ಕಾಲದ ಎಲ್ಲರ ಸವಾಲು ಎನ್ನಿಸುತ್ತದೆ.

ಸಹಜವಾದ ರೂಪಕಗಳ ಮೂಲಕ ಕಥೆಗಳನ್ನು ಹೇಳುವ ರಮೇಶಬಾಬು ಅವರ ಕಥೆಗಳು ಗಾಢವಾದ ಭಾವವನ್ನು ಉಳಿಸುತ್ತವೆ. 'ಮಹಾತ್ಮೆ', 'ಮನೆ', 'ಸಾವಯವ' ಮುಂತಾದ ಕಥೆಗಳು ನೀಡುವ ಓದಿನ ಮುದ ದೊಡ್ಡದು. ಆದರೆ ಎಲ್ಲಾ ಕಥೆಗಳೂ ಇಂತಹ ಅನುಭವ ನೀಡುತ್ತವೆ ಎಂದು ಹೇಳುವುದಕ್ಕಾಗದು. ಇಲ್ಲಿನ ಕಥೆಗಳು ಕೆಲವೊಮ್ಮೆ ಪೇಲವ ಅನ್ನಿಸುತ್ತವೆ. ಇದಕ್ಕೆ ಕಾರಣವೆಂದರೆ ಪ್ರಾಯಶಃ ಕಥೆಗಾರರು ಕೆಲವು ಕಥೆಗಳನ್ನು ಹೇಳುವಾಗ ಪ್ರಜ್ಞಾ ಪೂರ್ವಕವಾಗುವುದು. ಎಲ್ಲ ಕಥೆಗಳೂ ಪ್ರಥಮ ಪುರುಷ ನಿರೂಪಣೆಯಲ್ಲಿಯೇ ನಿಂತು ನಿರ್ದಿಷ್ಟ ದೂರದಲ್ಲಿ ನಿರೂಪಿಸಲು ಯತ್ನಿಸುತ್ತಾರೆ. ಇಲ್ಲಿ ಬೇರೆ ಥರದ ನಿರೂಪಣೆ ಸಾಧ್ಯವಾಗಬಹುದಿತ್ತೇ? ಆಗ ಇಲ್ಲಿನ ಕಥೆಗಳು ಯಾವ ಆಯಾಮಗಳನ್ನು ಪಡೆದು ಕೊಳ್ಳುತ್ತಿದ್ದವು? ಎನ್ನುವುದು ಊಹೆ ಮಾತ್ರ. ●